ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದವರಿಗೆ ಕೊಟ್ಟಿಲ್ಲ. ಪೂರ್ತಿ 471 ಸೀಟುಗಳನ್ನೂ ಕೂಡ ಎನ್‌ಆರ್‌ಐಗಳಿಗೆ ಅಂದರೆ ವಿದೇಶದಲ್ಲಿರುವಂಥ ವ್ಯಕ್ತಿಗಳಿಗೆ ಕೊಟ್ಟು 120 ಕೋಟಿ ರೂಪಾಯಿಗಳ ಹಗರಣವನ್ನು ಸರ್ಕಾರ ಮಾಡಿದೆ. ಆ ದೃಷ್ಟಿಯಿಂದ ಇದರ ಬಗ್ಗೆ ಮುಂದಿನ ವಿಚಾರಣೆಯಾಗಬೇಕಾಗಿರುವುದರಿಂದ ಸನ್ಮಾನ್ಯ ಸಚಿವರು ರಾಜೀನಾಮೆಯನ್ನು ಕೊಡಲೇಬೇಕು ಎಂದು ಕೇಳಿಕೊಳ್ಳುತ್ತೇನೆ.

4) ANNOUNCEMENT

MR. DEPUTY SPEAKER: I welcome Dr. B.Khan, Chairman and other hon.members of the Bihar Public Accounts Committee who are witnessing the proceedings of the House from the Speaker's gallery.

5) ನಿಯಮ 69ರ ಮೇರೆಗೆ ಚರ್ಚೆ:

ವಿಷಯ: ಎಂ.ಬಿ.ಬಿ.ಎಸ್. ಕೋರ್ಸಿಗೆ ಪೇಮೆಂಟ್ ಸೀಟ್‌ನಲ್ಲಿ ಆಗಿದೆ ಎನ್ನಲಾದ ಅವ್ಯವಹಾರದ ಬಗ್ಗೆ. (ಮುಂದುವರಿದ ಚರ್ಚೆ)

+ ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಉಪಾಧ್ಯಕ್ಷರೇ, ನಾನು ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ. ಎರಡು ಪ್ರಮುಖವಾದ ವಿಚಾರಗಳನ್ನು ಮಾತ್ರ ಮಂಡನೆ ಮಾಡಲು ಇಷ್ಟಪಡುತ್ತೇನೆ. ನಾವು ನೇರವಾಗಿ ಸಚಿವರು ಮತ್ತು ಸರ್ಕಾರ ಇದಕ್ಕೆ ಜವಾಬ್ದಾರರು ಎಂದು ಏಕೆ ಹೇಳುತ್ತೇವೆ ಎಂದರೆ 1994ನೇ ಇಸವಿಯಲ್ಲಿ ಈ ಪ್ರಕರಣ ಪ್ರಾರಂಭವಾಗಿದ್ದರೂ ಸಹ 1994-95 ಮತ್ತು 1995-96ರಲ್ಲೂ ಇದು ಮುಂದುವರೆದಿದೆ. 1994-95ರಲ್ಲಿ ಬ್ಯಾಕ್‌ಲಾಗ್ ವೇಕೆನ್ಸಿ ಎಂದು ಸುಮಾರು 173 ಇಂಥ ಸೀಟುಗಳನ್ನು ಕೊಡಲಾಗಿದೆ. ಈ 173 ಸೀಟುಗಳನ್ನೂ 50 ಸಾವಿರ ಡಾಲರ್‌ಗಳನ್ನು ತೆಗೆದುಕೊಂಡು ಎನ್‌ಆರ್‌ಐ ನವರಿಗೆ ಕೊಟ್ಟಿದ್ದಾರೆ. 1995-96ರಲ್ಲಿ ಸುಮಾರು 143 ಜನರನ್ನು ಇದೇ ರೀತಿಯಲ್ಲಿ ತೆಗೆದುಕೊಂಡಿದ್ದಾರೆ. 1994ರಲ್ಲಿ ಈ ಪ್ರಕರಣದ ಬಗ್ಗೆ ಲೋಕಾಯುಕ್ತದಿಂದ ತನಿಖೆಯಾಗಬೇಕು ಎಂದು ನಾವು ಹೇಳಿದಾಗಲೂ, ಈ ಪ್ರಕರಣದಲ್ಲಿ ತಪ್ಪುಗಳಿವೆ ಎನ್ನುವ ವಿಚಾರವನ್ನು ಸ್ಪಷ್ಟವಾಗಿ ಸರ್ಕಾರದ ಗಮನಕ್ಕೆ ತಂದಾಗಲೂ ಕೂಡ ಸರ್ಕಾರ ಮತ್ತೆ ಅದನ್ನು ಮುಂದುವರೆಸಲು ಕಾರಣವೇನು? ಅದಕ್ಕೆ ಕಾರಣವಿಷ್ಟೇ, ಅದರಿಂದ ಸಿಗುವಂಥ ಮೊತ್ತವನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಮತ್ತು ಚುನಾವಣಾ ವೆಚ್ಚಕ್ಕಾಗಿ ಇದನ್ನು ವಿನಿಯೋಗ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅದಕ್ಕಾಗಿ ಇವತ್ತಿನ ಸರ್ಕಾರ ಮತ್ತು ಸಚಿವರು ರಾಜೀನಾಮೆ ಕೊಡಬೇಕು. ಇದರಲ್ಲಿ ಅನ್ಯಾಯವಾಗಿದೆ, ಇದು ಲೋಕಾಯುಕ್ತ ತನಿಖೆಯಾಗುತ್ತದೆ ಎನ್ನುವುದು ಗೊತ್ತಿದ್ದರೂ ಇದನ್ನು ಮುಂದುವರೆಸಿದ